# ಸ್ವಾಮಿ ಸತ್ಪ್ರಕಾಶಾನಂದ (೧೮೮೮-೧೯೭೯)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ** ಅನುವಾದ: **ಕುಮಾರಿ ಪಿ. ಉಷಾ**

**ಭಾಗ ೨**

“ಆ ಸಲವೇ ಐವರು ಯುವಕ ಭಕ್ತರು ಬಾಬುರಾಮ ಮಹಾರಾಜರಿಂದ ಅನುಮತಿ ಪಡೆದು ದೀಕ್ಷೆಗಾಗಿ ಶ್ರೀಮಾತೆಯವರಲ್ಲಿಗೆ ಹೋದರು. ಅವರನ್ನು ನೋಡಿ ನನಗೂ ಶ್ರೀಮಾತೆಯವರಿಂದ ದೀಕ್ಷೆಯನ್ನು ಪಡೆಯುವ ಹಂಬಲವಾಯಿತು. ಬಾಬುರಾಮ ಮಹಾರಾಜರು ನನಗೆ ಅನುಮತಿ ನೀಡಿದರು. ನಾವು ಬೆಳಗ್ಗೆ ಮಹಾರಾಜರಿಗೆ ಪ್ರಣಾಮ ಮಾಡಿ, ಅವರನ್ನು ಬೀಳ್ಕೊಂಡೆವು. ದಾರಿಯಲ್ಲಿ ನನಗೆ ರಕ್ತ ಆಮಶಂಕೆ ಶುರುವಾಯಿತು. ನನ್ನೊಡನಿದ್ದ ನನ್ನ ಸ್ನೇಹಿತರು ನಾನು ಜಯರಾಂಬಾಟಿಗೆ ಹೋದರೆ ಶ್ರೀಮಾತೆಯವರಿಗೆ ತೊಂದರೆಯಾಗುವುದೆಂದು ನನ್ನನ್ನು ತಡೆದರು. ಅವರ ಮಾತಿನಂತೆ ನಾನು ಕಲ್ಕತ್ತಕ್ಕೆ ಹೋಗಿ ಒಬ್ಬ ನೆಂಟರ ಮನೆಯಲ್ಲಿ ತಂಗಿ ಕೆಲವು ದಿನಗಳಲ್ಲಿ ಆರೋಗ್ಯವನ್ನು ಸುಧಾರಿಸಿಕೊಂಡೆ.



ಇತರ ಸಂನ್ಯಾಸಿಗಳೊಂದಿಗೆ (ಸ್ವಾಮಿ ಸತ್ಪ್ರಕಾಶಾನಂದರು ಎಡದಿಂದ ನಾಲ್ಕನೆಯವರು)

ಬಳಿಕ ಬೇಲೂರು ಮಠಕ್ಕೆ ಹೋಗಿ ಬಾಬುರಾಮ ಮಹಾರಾಜರನ್ನು ಕಂಡೆ. ಅವರಿಗಾಗಲೇ ನನ್ನ ಸಮಾಚಾರ ತಿಳಿದಿತ್ತು. ನನ್ನನ್ನು ನೋಡಿ ಅವರೆಂದರು, “ಸಮಯ ಪಕ್ವವಾಗಿರದಿದ್ದರೆ ದೀಕ್ಷೆ ತೆಗೆದುಕೊಳ್ಳಲಾಗುವುದಿಲ್ಲ,” ನಂತರ ನಾನು ರಾಜಾ ಮಹಾರಾಜರನ್ನು ಭೇಟಿಯಾಗಲು ಹೋದೆ. ಅವರು ನನ್ನನ್ನು ಬಯ್ಯುವರೆಂದು ಹೆದರಿದ್ದೆ, ನನ್ನನ್ನು ಕಂಡಾಕ್ಷಣ ಮಹಾರಾಜರೆಂದರು, “ಶ್ರೇಯಾಂಸಿ ಬಹುವಿಘ್ನಾನಿ”. ಇದನ್ನು ಕೇಳಿ ನನ್ನ ಚಿಂತೆ ದೂರವಾಯಿತು; ಸ್ವಲ್ಪ ಶಾಂತಿ ದೊರೆಯಿತು.

ಶ್ರೀಮಾತೆಯವರು ಎಲ್ಲರಿಗಿಂತಲೂ ಹಿರಿಯರು –ಅವರಿಂದಲೇ ದೀಕ್ಷೆಯನ್ನು ಪಡೆಯಲು ನನ್ನ ಮನಸ್ಸಿನಲ್ಲಿ ದ್ವಂದ್ವವಿತ್ತು. ಅದೇ ಸಮಯಕ್ಕೆ ಮಹಾಪುರುಷ ಮಹಾರಾಜರು ಗಂಗೆಯ ಘಾಟಿನಲ್ಲಿ ತಿರುಗಾಡುತ್ತಿದ್ದರು. ನಾನು ಅವರನ್ನು ಕೇಳಿದೆ, “ಕೆಲವರು ಶ್ರೀಮಾತೆಯವರಿಂದಲೂ ಕೆಲವರು ಮಹಾರಾಜರಿಂದಲೂ ದೀಕ್ಷೆಯನ್ನು ಪಡೆಯುತ್ತಾರೆ. ಇದರಲ್ಲಿ ಏನಾದರೂ ವ್ಯತ್ಯಾಸವಿದೆಯೆ?” ಮಹಾಪುರುಷ ಮಹಾರಾಜರೆಂದರು, “ನನಗಂತೂ ಯಾವ ವ್ಯತ್ಯಾಸವೂ ತೋರದು. ಗಂಗಾಜಲವೇ ಎರಡೂ ಕೊಳವೆಗಳಿಂದ ಸುರಿಯುತ್ತಿದೆ, ಅಷ್ಟೆ. ಠಾಕೂರರ ಕೃಪೆಯೇ ಶ್ರೀಮಾತೆ ಹಾಗೂ ಮಹಾರಾಜರ ಮುಖಾಂತರ ಹರಿಯುತ್ತಿದೆ. ಮತ್ತೊಂದು ವಿಷಯ – ದೀಕ್ಷೆಯನ್ನು ತೆಗೆದುಕೊಳ್ಳುವುದು ಎಂದರೇನರ್ಥ? ದೀಕ್ಷೆಯನ್ನು ಯಾರೂ ತೆಗೆದುಕೊಳ್ಳಲಾರರು, ಅದನ್ನು ಪಡೆಯಲಾಗುತ್ತದೆ.” ಇದನ್ನು ಕೇಳಿದಾಗ ನನ್ನೊಳಗೆ ದೊಡ್ಡ ಪರಿವರ್ತನೆಯಾಯಿತು. ದೀಕ್ಷೆಯನ್ನು ತೆಗೆದುಕೊಳ್ಳಲು ನಾನ್ಯಾರು? ದೀಕ್ಷೆ ಯಾರಿಂದ ಸಿಗುತ್ತದೆ, ಎನ್ನುವುದನ್ನು ಕಂಡುಕೊಳ್ಳಬೇಕು. ನಾನು ಕೂಡಲೆ ಮಹಾರಾಜರ ಬಳಿಸಾರಿ ದೀಕ್ಷೆಯ ಬಗ್ಗೆ ಮಾತನಾಡಿದೆ. ಮಹಾರಾಜರೆಂದರು, “ನೀನು ಸ್ವಲ್ಪ ಕಾಯಬೇಕು. ನಾನು ಪಂಚಾಂಗವನ್ನು ನೋಡುತ್ತೇನೆ. ಅಲ್ಲಿಯವರೆಗೆ ನಾನು ಈ ತನಕ ನಿನಗೆ ಹೇಳಿರುವುದನ್ನು ಪಾಲಿಸುತ್ತಿರು.”

೧೯೧೯ರಲ್ಲಿ ರಾಜಾ ಮಹಾರಾಜರು ಸ್ವಾಮಿ ತುರೀಯಾನಂದರನ್ನು ಕರೆದುಕೊಂಡು ದಕ್ಷಿಣ ರಾಜ್ಯಗಳಿಂದ ಪುರಿಯ ಹಾದಿಯಲ್ಲಿ ಕೊಲ್ಕತ್ತಕ್ಕೆ ಮರಳಿದರು. ಪುರಿಯಲ್ಲಿ ಸ್ವಾಮಿ ತುರೀಯಾನಂದರು ಶಸ್ತ್ರಚಿಕಿತ್ಸೆಗೊಳಗಾಗಿದ್ದರು. ಆಗ ಅವರು ಬಹಳ ಅಸ್ವಸ್ಥರಾಗಿದ್ದರು. ‘ಉದ್ಬೋಧನ’ದ ಮಾಳಿಗೆಯಲ್ಲಿದ್ದ ಶರತ್ ಮಹಾರಾಜರ ಕೋಣೆಯಲ್ಲಿಯೆ ಅವರಿಗೆ ತಂಗುವ ವ್ಯವಸ್ಥೆಯನ್ನು ಮಾಡಲಾಗಿತ್ತು. ರಾಜಾ ಮಹಾರಾಜರು ಕೆಳಂತಸ್ತಿನ ಕೋಣೆಯಲ್ಲಿರುತ್ತಿದ್ದರು. ನಾನು ಕೃಷ್ಣಲಾಲ್ ಮಹಾರಾಜರೊಡನೆ ಢಾಕಾದಿಂದ ಕಲ್ಕತ್ತಕ್ಕೆ ಬಂದು ಮಹಾರಾಜರ ದರ್ಶನಕ್ಕಾಗಿ ‘ಉದ್ಬೋಧನ’ಕ್ಕೆ ಹೋದೆ. ಅವರಿಗೆ ಪ್ರಣಾಮ ಮಾಡುತ್ತಿದ್ದಂತೆಯೆ ಕೃಷ್ಣಲಾಲ್ ಮಹಾರಾಜರು ಹೇಳಿದರು, “ಸಾಧುವಿನ ದರ್ಶನ ಪಡೆದದ್ದಾಯಿತು, ಪ್ರಣಾಮ ಮಾಡಿದ್ದಾಯಿತು, ಸ್ಪರ್ಶವನ್ನೂ ಮಾಡಿದ್ದಾಯಿತು – ಇನ್ನೇನು ಪ್ರಶ್ನೆ ಇದ್ದೀತು?”

ತದನಂತರ ಒಂದು ದಿನ ಮಹಾಪುರುಷ ಮಹಾರಾಜರು ಬೇಲೂರು ಮಠದಿಂದ ಕಲ್ಕತ್ತಕ್ಕೆ ಹೋಗಿದ್ದರು. ಅಲ್ಲಿಂದ ಮರಳಿ ಬಂದಾಗ, “ಮಹಾರಾಜರು ನಿನ್ನನ್ನು ತಮ್ಮ ಬಳಿಗೆ ಬರಹೇಳಿದ್ದಾರೆ,” ಎಂದರು. ಅದೇ ದಿನವೋ ಅಥವ ಮರುದಿನವೊ ನಾನು ಅವರ ದರ್ಶನಕ್ಕಾಗಿ ಹೋದೆ. ಆಗವರು ಬಲರಾಮ ಮಂದಿರದಲ್ಲಿ ನನಗೆ ದೀಕ್ಷೆಯನ್ನು ನೀಡಿದರು. ಅದೊಂದು

ವಿಶೇಷ ಹಬ್ಬದ ದಿನವಾಗಿತ್ತು. ಸ್ವಾಮಿ ಶಂಕರಾನಂದಜಿಯವರ ನಿರ್ದೇಶನದಂತೆ ನಾನು ಸ್ವಲ್ಪ ಹಣ್ಣನ್ನೂ ವಸ್ತ್ರವನ್ನೂ ತಂದು ಅವರಿಗೆ ದಕ್ಷಿಣೆಯಾಗಿ ಕೊಟ್ಟಿದ್ದೆ.

ದೀಕ್ಷಾ ಸಮಯ ನಾನು ಮಹಾರಾಜರನ್ನು ಕೇಳಿದೆ, ''ಇಷ್ಟದೇವತೆಯೊಂದಿಗೆ ನನಗಿರುವ ಸಂಬಂಧ ಏನು?'' ಅವರೆಂದರು, ''ಸಾಧನೆ ಭಜನೆಯ ಜತೆಜತೆಗೆ ಸಕಾಲದಲ್ಲಿ ನಿನ್ನ ಅಂತರ್ಯದಲ್ಲಿ ಇಷ್ಟದೇವರು ಪ್ರಕಾಶಿಸುತ್ತಾರೆ. ಇಷ್ಟದೇವರೆ ನಿನ್ನ ಸರ್ವಸ್ವ.'' ನಂತರ ನಾನು ಮಂತ್ರದ ಅರ್ಥವನ್ನು ಕೇಳಿದಾಗ ಹೇಳಿದರು, ''ಮಂತ್ರ ಹಾಗೂ ಇಷ್ಟದೇವತೆ – ಇವುಗಳಿಗೆ ಬೇರೆ ಬೇರೆ ಅರ್ಥಗಳಿಲ್ಲ. ಎರಡೂ ಒಂದೇ. ಆತನೆ ನಿನ್ನ ಸರ್ವಸ್ವವೆಂದು ತಿಳಿ.'' ಅವರು ನೀಡಿದ ಸಾಧನಾಪ್ರಣಾಳಿಯನ್ನು ದೃಢತೆ ಹಾಗು ತಾಳ್ಮೆಯಿಂದ ಅಭ್ಯಾಸ ಮಾಡಲು ನಿರ್ದೇಶಿಸಿದರು. ನನಗವರು ಎರಡು ಬಾರಿ ಪುರಶ್ಚರಣ ಮಾಡಲು ಹೇಳಿದ್ದರು.

ಮತ್ತೊಂದು ದಿನ ನಾನು ಮಹಾರಾಜರ ದರ್ಶನ ಪಡೆಯಲು 'ಉದ್ಬೋಧನ'ಕ್ಕೆ ಹೋದೆ. ಅಂದು ಮಹಾರಾಜರು ಕುದುಮಣಿ–ಗೆ ಒಂದು ಜಪಮಾಲೆಯನ್ನು ತರಲು ಹೇಳಿದರು. ಆ ಮಾಲೆಯಲ್ಲಿ ಮಹಾರಾಜರು ಸ್ವತಃ ಜಪಿಸಿ, ಅದನ್ನು ನನಗೆ ಕೊಟ್ಟರು. ಇಂದಿಗೂ ನಾನು ಅದನ್ನು ಉಪಯೋಗಿಸುತ್ತಿರುವೆ.

ಠಾಕೂರರ ಸಂನ್ಯಾಸಿ ಶಿಷ್ಯರ ನಡುವಣ ಪರಸ್ಪರ ಸಂಬಂಧ ಅದೆಷ್ಟು ಗಭೀರ, ಆಂತರಿಕ ಹಾಗು ಮಧುರವಾಗಿತ್ತು ಎಂಬುದನ್ನು ನೋಡಿ ಕಲಿಯಬೇಕು. ಇವುಗಳನ್ನು ಮಾತುಗಳಲ್ಲಿ ವರ್ಣಿಸಲಾಗದು. ಮಹಾರಾಜ್ ಒಮ್ಮೆ ಪುರಿ ದರ್ಶನ ಮಾಡಿ ಹಿಂದಿರುಗಿದ್ದರು. ಸ್ವಾಮೀಜಿ ಹಾಸ್ಯ ಮಾಡುತ್ತ, ''ಏನಪ್ಪ ರಾಖಾಲ್, ಪುರಿಯಲ್ಲಿ ಜಗನ್ನಾಥನ ಕರತಾಳದಂತಹ ಕಣ್ಣುಗಳನ್ನು ನೋಡಿ ನಿನ್ನ ಕಣ್ಣುಗಳಲ್ಲಿ ನೀರು ಬಂದಿತ್ತಂತೆ – ಅದು ಭಾವದಿಂದಲೋ ಅಥವ ಭಯದಿಂದಲೊ?'' ಎಂದರು. ರಾಜಾ ಮಹಾರಾಜರು ಸುಮ್ಮನಿದ್ದರು.

ಸ್ವಾಮಿ ಪ್ರೇಮಾನಂದರು ಸ್ವಭಾವತಃ ಅತ್ಯಂತ ಸ್ನೇಹಪರರು. ಯುವ ಸಂನ್ಯಾಸಿ ಹಾಗೂ ಬ್ರಹ್ಮಚಾರಿಗಳಿಗೆ ಅವರು ತಾಯಿಯಂತೆ ಉಪದೇಶ–ನಿರ್ದೇಶಗಳನ್ನು ನೀಡುತ್ತಿದ್ದರು; ಅವರ ಆವಶ್ಯಕತೆಗಳ ಬಗ್ಗೆ ಸಚೇತರಾಗಿರುತ್ತಿದ್ದರು. ಕೇವಲ ಅವರ ಜಪಧ್ಯಾನದ ಸಮಯದ ಮಾತ್ರವಲ್ಲದೆ, ದೇವರ ಪೂಜೆ, ತರಕಾರಿ ಹೆಚ್ಚುವುದು, ತಂತಮ್ಮ ಕರ್ತವ್ಯ ಕರ್ಮಗಳನ್ನು ಚೆನ್ನಾಗಿ ಮಾಡುವ ವಿಷಯದಲ್ಲೂ ಮುತುವರ್ಜಿ ವಹಿಸುತ್ತಿದ್ದರು. ಅಷ್ಟೇಕೆ, ಕಸಗುಡಿಸುವುದು, ತೆರೆದ ಪ್ರಾಂಗಣದಲ್ಲಿ ಕಳೆ ಕೀಳುವುದು – ಇಂತಹ ಚಿಕ್ಕಪುಟ್ಟ ಕೆಲಸಗಳನ್ನೂ ದೇವರ ಪೂಜೆಯನ್ನು ಮಾಡುವಂತೆ ಮನೋಯೋಗದಿಂದಲೂ, ತಪ್ಪಿಲ್ಲದೆಯೂ ಮಾಡಲು ಹೇಳುತ್ತಿದ್ದರು. ಮಸಿಕುಡಿಕೆಯಲ್ಲಿ ಶಾಯಿ ತುಂಬುವಾಗ ಒಂದು ತೊಟ್ಟು ಸಹ ಹೊರಗೆ ಚೆಲ್ಲದಂತೆ ಎಚ್ಚರಿಕೆ ವಹಿಸಬೇಕಾಗಿತ್ತು.

ಒಮ್ಮೆ ನಾನು ತರಕಾರಿಯ ಸಿಪ್ಪೆ ಸುಲಿಯುತ್ತಿದ್ದೆ. ಸ್ವಾಮಿ ಪ್ರೇಮಾನಂದರು ಹೇಳಿದರು, ''ಸಿಪ್ಪೆಯೊಂದಿಗೆ ಬಹಳಷ್ಟು ತಿರುಳೂ ಹೋಗುತ್ತಿದೆ.'' ನಿಸ್ಸಂದೇಹವಾಗಿಯೂ ಅವರು ಅಪವ್ಯಯವನ್ನು ಇಷ್ಟಪಡುತ್ತಿರಲಿಲ್ಲ. ಅದಕ್ಕಿಂತಲೂ ಹೆಚ್ಚಾಗಿ ಅವರು ಯಾವುದೇ ಕಾರ್ಯವನ್ನು ಅಸಡ್ಡೆಯಿಂದ ಮಾಡುವುದನ್ನು ಸಹಿಸುತ್ತಿರಲಿಲ್ಲ. ಜನರ ಕಣ್ಣೆದುರು ಮಾಡುವುದು ಮಾತ್ರವಲ್ಲ – ಯಾರೂ ಇಲ್ಲದಿರುವಾಗಲೂ ಸಾಮಾನ್ಯ ಕರ್ತವ್ಯ ಕರ್ಮಗಳನ್ನು ಸರಿಯಾಗಿ ಮಾಡುವುದೇ ಚಾರಿತ್ರ್ಯದ ನಿಜವಾದ ಪರೀಕ್ಷೆ ಎಂಬ ಈ ಭಾವವನ್ನು ನಮ್ಮ ಮನಸ್ಸಿನಲ್ಲಿ ಬೇರೂರಿಸಲು ಪ್ರಯತ್ನಿಸುತ್ತಿದ್ದರು.

ಗೃಹಸ್ಥ ಭಕ್ತರನ್ನೂ ಅವರು ಸಮನಾಗಿ ಪ್ರೀತಿಸುತ್ತಿದ್ದರು. ಬರಿಯ ಅವರುಗಳ ಆಧ್ಯಾತ್ಮಿಕ ಉನ್ನತಿಯ ಬಗ್ಗೆ ನಿಗಾ ಇರಿಸುವುದಲ್ಲದೆ ಅವರ ಲೌಕಿಕ ಅನುಕೂಲತೆಗಳ ಬಗ್ಗೆಯೂ ಗಮನ ಕೊಡುತ್ತಿದ್ದರು. ಒಮ್ಮೊಮ್ಮೆ ಮಠದಲ್ಲಿ ಬೆಳೆದ ಫಸಲನ್ನು ಅವರಿಗೆ ಕೊಡುತ್ತಿದ್ದರು. ಭಕ್ತರಿಗೆ ಉಣಬಡಿಸುವುದೆಂದರೆ ಅವರಿಗೆ ವಿಶೇಷ ಪ್ರೀತಿ. ಮಧ್ಯಾಹ್ನದ ಹೊತ್ತಿಗೆ ಮಠಕ್ಕೆ ಬರುವ ಭಕ್ತರಿಗೆ ಭೋಜನದ ವ್ಯವಸ್ಥೆಯನ್ನು ಮಾಡುತ್ತಿದ್ದರು. ತಡವಾಗಿ ಬರುವವರಲ್ಲಿ ಹೆಚ್ಚಿನವರು ಅಪರಿಚಿತರಾಗಿದ್ದು, ಅವರಿಗಾಗಿ ಮತ್ತೆ ಅಡಿಗೆ ಮಾಡಬೇಕಾಗುತ್ತಿತ್ತು. ಕೆಲಸದವರು ಅಡಿಗೆಮನೆಯನ್ನು ಸ್ವಚ್ಛಗೊಳಿಸಿ ಮಲಗಿದ್ದರೆ, ಸ್ವಾಮಿ ಪ್ರೇಮಾನಂದರೇ ಸ್ವತಃ ಅಡಿಗೆ ಮನೆಗೆ ಹೋಗಿ ಕೆಲಸದಲ್ಲಿ ತೊಡಗುತ್ತಿದ್ದರು.

ಒಂದು ದಿನ ಬೆಳಿಗ್ಗೆ ಗಭೀರ ಧ್ಯಾನಾನಂತರ ಆನಂದಭರಿತರಾಗಿ ದೇದೀಪ್ಯಮಾನರಾಗಿದ್ದ ಅವರು ನನ್ನತ್ತ ಬಂದು ನನ್ನ ಹೆಗಲ ಮೇಲೆ ಕೈಯಿರಿಸಿ ತುಸು ಜಗ್ಗಿದರು. ನನ್ನ ರೋಮರೋಮಗಳೂ ರೋಮಾಂಚನಗೊಂಡು ನವಿರೆದ್ದವು. ಮತ್ತೊಂದು ಸಲ ಅವರು ತಾವಾಗಿಯೇ ನನ್ನನ್ನು ಹಿಡಿದು ಆಶೀರ್ವದಿಸಿದರು.

ಪೂಜೆ ಹಾಗು ಧ್ಯಾನ ಮಾಡುವಾಗ ಅವರ ಮುಖಮಂಡಲವು ತೇಜೋಮಯವಾಗಿರುತ್ತಿತ್ತು. ವಕ್ಷಸ್ಥಳವು ರಕ್ತ ರಂಜಿತವಾಗುತ್ತಿತ್ತು. ಬರಿಯ ಬೇಲೂರು ಮಠದ ಮಂದಿರದಲ್ಲಿ ಮಾತ್ರವಲ್ಲದೆ, ಅವರೊಂದಿಗೆ ದರ್ಶಿಸಿದ ಇತರ ದೇವಾಲಯಗಳಲ್ಲೂ ಅವರನ್ನು ಇದೇ ರೀತಿ ಕಂಡಿರುವೆ.

ಒಮ್ಮೆ ಢಾಕಾದ ಭಕ್ತರೊಬ್ಬರ ಮನೆಯಲ್ಲಿ ಮಧ್ಯಾಹ್ನ ಭೋಜನಕ್ಕೆ ಆಮಂತ್ರಿಸಲಾಗಿತ್ತು. ಸ್ಥಳೀಯ ಆಶ್ರಮದ ಸಾಧುಗಳೂ, ಬಹು ಮಂದಿ ಭಕ್ತರೂ ಮನೆಯ ಯಜಮಾನರ ಕೆಲವು ಬಂಧುಗಳೂ ಅಲ್ಲಿಗೆ ಹೋಗಿದ್ದರು. ಊಟಕ್ಕೆ ಮುಂಚೆ ನಾವೆಲ್ಲ ಬೈಠಕ್‌ಖಾನೆಯಲ್ಲಿ ಕುಳಿತಿದ್ದೆವು. ಸ್ವಾಮಿ ಪ್ರೇಮಾನಂದರು ತಮ್ಮ ಸ್ವಭಾವಸಿದ್ಧ ಉತ್ಸಾಹದಿಂದ ನೆರೆದವರೊಂದಿಗೆ ಮಾತನಾಡುತ್ತಿದ್ದರು. ಶ್ರೋತೃಗಳಲ್ಲಿ ವಸ್ತು ಸಂಗ್ರಹಾಲಯದ ಮೇಲ್ವಿಚಾರಕರೂ ಇದ್ದರು. ಅವರು ನಾಸ್ತಿಕರು. ಮಹಾರಾಜರು

ಮಾತಿನ ಮಧ್ಯದಲ್ಲಿ, ''ಭಕ್ತಿ, ಜ್ಞಾನ, ವಿಚಾರಬುದ್ಧಿ, ಅನಾಸಕ್ತಿ ಮುಂತಾದ ಆಧ್ಯಾತ್ಮಿಕ ಸಂಪತ್ತುಗಳಿಗಾಗಿ ಭಗವಂತನಲ್ಲಿ ಪ್ರಾರ್ಥಿಸಬೇಕು'' ಎನ್ನುತ್ತಿದ್ದಾಗ ಈ ಸಜ್ಜನರು, ''ನಾವೇಕೆ ಈಶ್ವರನಲ್ಲಿ ಪ್ರಾರ್ಥಿಸಬೇಕು? ಇದರಿಂದ ನಮಗೇನು ಪ್ರಯೋಜನ, ಆತನಿಗೆ ಅದು ತಿಳಿದಿಲ್ಲವೆ?'' ಎಂದು ಪ್ರಶ್ನಿಸಿದರು. ಉತ್ತರವಾಗಿ ಪ್ರೇಮಾನಂದರು, ''ಭಗವಂತನು ನಿಮ್ಮ ಬೇಡಿಕೆಗಳನ್ನೆಲ್ಲ ತಿಳಿದಿದ್ದು ಆತನು ಅವನ್ನೆಲ್ಲ ಈಡೇರಿಸುವನೆಂಬುದು ನಿಮ್ಮ ಅನುಭವಕ್ಕೆ ಬಂದಿದ್ದರೆ, ಆ ವಿಶ್ವಾಸ ನಿಮ್ಮಲ್ಲೆ ಸ್ಥಿರವಾಗಿದ್ದರೆ, ಆಗ ಪ್ರಾರ್ಥನೆಯ ಆವಶ್ಯಕತೆಯಿಲ್ಲ. ಆದರೆ ಅನೇಕರು ತಮ್ಮ ಪ್ರಾಪಂಚಿಕ ಆಸೆಗಳು ಹಾಗೂ ಐಹಿಕ ವಸ್ತುಗಳಿಗಾಗಿ ಭಗವಂತನನ್ನು ಪ್ರಾರ್ಥಿಸುತ್ತಾರೆ. ಬುದ್ಧಿವಂತರು ಕ್ಷಣಿಕ ವಸ್ತುಗಳ ಬದಲಾಗಿ ಚಿರಸಂಪತ್ತನ್ನು ಪಡೆಯುವ ಪ್ರಾರ್ಥನೆಯನ್ನು ಮಾಡುತ್ತಾರಲ್ಲವೆ? ರಾಜರಾಜೇಶ್ವರನಾದ ಆತನನ್ನು ಕ್ಷುಲ್ಲಕ ವಸ್ತುಗಳಿಗಾಗಿ ಮೂರ್ಖರಲ್ಲದೆ ಮತ್ತಾರು ಬೇಡುವರು? ನೀನು ಆತನಲ್ಲಿ ಪ್ರಾರ್ಥಿಸುವುದೇ ಆದರೆ, ಶ್ರೇಷ್ಠ ವಸ್ತುವಿಗಾಗಿಯೇ ಪ್ರಾರ್ಥಿಸು.''

ಸ್ವಾಮಿ ಪ್ರೇಮಾನಂದರು ಸಾಮಾನ್ಯ ಜನಸಭೆಯಲ್ಲಿ ಭಾಷಣವನ್ನು ನೀಡುತ್ತಿದ್ದುದು ವಿರಳ. ಅವುಗಳಲ್ಲಿ ಕೆಲವನ್ನು ನಾನು ಕೇಳಿದ್ದೇನೆ. ಅವರು ಯಾವಾಗಲೂ ಹೆಚ್ಚಿನ ತಯಾರಿಕೆಯಿಲ್ಲದೆ ಭಾಷಣ ನೀಡುತ್ತಿದ್ದರು. ಅವರ ಹೃದಯಾಂತರಾಳದಿಂದ ಮನ ಮುಟ್ಟುವ ಮಾತುಗಳು ಹೊರಹೊಮ್ಮುತ್ತಿದ್ದು ಅವು ಶ್ರೋತೃಗಳ ಮನಸ್ಸನ್ನು ಸ್ಪರ್ಶಿಸುತ್ತಿದ್ದವು. 'ಮಾನವ ಸೇವೆಯೆ ಈಶ್ವರ ಸೇವೆ' ಎಂಬ ಭಾವಕ್ಕೆ ಅವರು ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡುತ್ತಿದ್ದರು.

೧೯೨೧ರಲ್ಲಿ ಮಹಾರಾಜರು ಕಾಶಿಯಲ್ಲಿ ಅನೇಕರಿಗೆ ಸಂನ್ಯಾಸ ದೀಕ್ಷೆಯನ್ನು ನೀಡಿದರು. ಆಗ ಶರತ್ ಮಹಾರಾಜರು ನನಗೆ ಸಂನ್ಯಾಸವನ್ನು ಪಡೆಯಲು ಹೇಳಿದರು. ನಾನೆಂದೆ, ''ನನ್ನ ತಾಯಿ ಬದುಕಿರುವ ತನಕ ಅವರ ಸೇವೆಯನ್ನು ಮಾಡಬೇಕು. ನಂತರ ಆಶ್ರಮ ಸೇರಲು ಮಹಾರಾಜರು ನನಗೆ ಹೇಳಿರುವರು.'' ಆಗ ಯೋಗಿನ್ ಮಾ ನನ್ನನ್ನು ಗದರಿಸಿದರು, ''ವೃದ್ಧ ತಾಯಿಯನ್ನು ಕೈಕಾಲು ಕಟ್ಟಿ ಬುಢಿಗಂಗಾನದಿಗೆ ಎಸೆದು ಕೌಪೀನವನ್ನು ಧರಿಸಿ ಸಂನ್ಯಾಸಿಯಾಗು. ಅಪ್ಪಟ ವೈರಾಗ್ಯವನ್ನು ತೋರು.''

೧೯೨೪ರಲ್ಲಿ ನನ್ನ ತಾಯಿಯವರು ತೀರಿಕೊಂಡ ಬಳಿಕ ಪತ್ರ ಬರೆದು ಸಂನ್ಯಾಸ ದೀಕ್ಷೆಗಾಗಿ ಮಹಾಪುರುಷಜಿಯವರನ್ನು ಪ್ರಾರ್ಥಿಸಿದೆ. ವಿಳಂಬವಿಲ್ಲದೆ ಅವರು ನನಗೆ ಸಂನ್ಯಾಸವನ್ನು ಅನುಗ್ರಹಿಸುವುದಾಗಿ ತಮ್ಮದೇ ಬರವಣಿಗೆಯಲ್ಲಿ ಪತ್ರದ ಮೂಲಕ ತಿಳಿಸಿದರು. ಆದರೆ ನನ್ನ ದುರದೃಷ್ಟದಿಂದಾಗಿ ೧೯೨೫ರ ಶ್ರೀರಾಮಕೃಷ್ಣರ ಜನ್ಮದಿನದಂದು ನನಗೆ ಸೋಪವೀತ ಸಗೈರಿಕ ಬ್ರಹ್ಮಚರ್ಯ ವ್ರತದ ದೀಕ್ಷೆಯನ್ನು ನೀಡಿ, ನಂತರ ೧೯೨೭ರಲ್ಲಿ ಕಾಶೀ ಪುಣ್ಯಕ್ಷೇತ್ರದಲ್ಲಿ ಶ್ರೀಮಾತೆಯವರ ಜನ್ಮದಿನದಂದು ಸಂನ್ಯಾಸ ದೀಕ್ಷೆಯನ್ನು ಕರುಣಿಸಿದರು. ಮಹಾಪುರುಷಜಿಯವರ ಪ್ರೀತಿಯ ಒಂದು ದೃಷ್ಟಾಂತವನ್ನು ಉಲ್ಲೇಖಿಸುತ್ತಿರುವೆ. ಕೆಲವು ವರ್ಷಗಳ ಬಳಿಕ ನಾನೊಮ್ಮೆ ಬೇಲೂರು ಮಠಕ್ಕೆ ಹೋಗಿ ಅವರ ಶ್ರೀಚರಣ ಸ್ಪರ್ಶಕ್ಕಾಗಿ ಅವರ ಕೋಣೆಗೆ ಹೋದೆ. ಪ್ರಣಾಮ ಮಾಡಿದ ನಂತರ, ಕುಶಲಪ್ರಶ್ನೆಗಳಾದವು. ತರುವಾಯ ಅವರು ಮಠದ ಭಂಡಾರಿಯನ್ನು ಕರೆದು ನನ್ನ ಆರೋಗ್ಯಕ್ಕನುಕೂಲವಾದ ಆಹಾರದ ವ್ಯವಸ್ಥೆಯನ್ನು ಮಾಡಿದರು.''

*(ಮುಂದಿನ ಸಂಚಿಕೆಗೆ)*

## ಶ್ರೀಮಾತೆಯವರ ಉಪದೇಶಗಳು



✷ (ಒಬ್ಬಾಕೆ ಅನಾಮಧೇಯ ಭಕ್ತೆಗೆ) ಯಾರೊಂದಿಗೂ ಹೆಚ್ಚು ಬೆರೆಯಬೇಡ. ಭಾವನೋ, ಮಾವನೋ, ಯಾರೇ ಆಗಿರಲಿ, ಅವರ ಯಾವುದೇ ವ್ಯವಹಾರದಲ್ಲಿ ತಲೆ ಹಾಕಬೇಡ. 'ನಿನ್ನ ಪಾಡಿಗೆ ನೀನಿರು ಮನವೇ, ಯಾರ ಮನೆಗೂ ನೀನಲೆಯದಿರು.' ಕೊಬ್ಬರಿ ಲಾಡು ಎಂದರೆ ಶ್ರೀರಾಮಕೃಷ್ಣರಿಗೆ ತುಂಬ ಇಷ್ಟವಾಗಿತ್ತು. ನೀನು ಊರಿಗೆ ಹೋಗಿ ಅದನ್ನು ತಯಾರಿಸಿ ಶ್ರೀರಾಮಕೃಷ್ಣರಿಗೆ ನೈವೇದ್ಯ ಮಾಡು. ಅವರ ಸೇವೆ, ಜಪ ಧ್ಯಾನಗಳಲ್ಲಿ ಹೆಚ್ಚು ಹೊತ್ತನ್ನು ಕಳೆ. ಶ್ರೀರಾಮಕೃಷ್ಣರ ಪುಸ್ತಕಗಳನ್ನೆಲ್ಲ ಓದು.

✷ ಯಾರಿಗೆ ಎಂಥ ಕೆಲಸವನ್ನಾದರೂ ಮಾಡಿಕೊಡು. ಆದರೆ ಭಗವಂತನ ಹೊರತಾಗಿ ಇನ್ನು ಯಾರನ್ನೂ ಪ್ರೀತಿಸಬೇಡ. ಹಾಗೆ ಪ್ರೀತಿಸಿದರೆ ತುಂಬ ದುಃಖ ಪಡಬೇಕಾದೀತು.

✷ (ಒಬ್ಬಾಕೆ ಭಕ್ತೆಗೆ) ಗಂಡು ಜಾತಿಯನ್ನು ಮಾತ್ರ ಎಂದಿಗೂ ನಂಬಬೇಡ. ಅನ್ಯ ಪುರುಷರನ್ನೇಕೆ, ನಿನ್ನ ತಂದೆಯಾಗಲಿ, — ಏಕೆ, ಸ್ವಯಂ ಭಗವಂತನೇ ಪುರುಷರೂಪ ಧರಿಸಿ ಬಂದು ನಿನ್ನ ಮುಂದೆ ನಿಂತರೂ ನಂಬಬೇಡ.

✷ ಅಕಾಲದಲ್ಲಿ ತೀರ್ಥಯಾತ್ರೆ ಮಾಡಬಾರದು ಎಂದು ಸಂಸಾರಸ್ಥರಲ್ಲಿ ಒಂದು ಮಾತಿದೆ. ನೋಡು, ಪುಣ್ಯಕಾರ್ಯಗಳನ್ನು ಮಾಡುವಾಗ ಕಾಲಾಕಾಲ ವಿವೇಚನೆ ಮಾಡುವುದುಂಟು. ಆದರೆ ಕಾಲ(ಮೃತ್ಯು)ನಿಗೆ ಕಾಲಾಕಾಲ ವಿವೇಚನೆಯಿಲ್ಲ. ಮೃತ್ಯುವಿಗೆ ಇಂಥದೇ ಸಮಯವೆಂಬ ನಿರ್ಧಾರವಿಲ್ಲದ್ದರಿಂದ, ಯಾವಾಗ ಸುಯೋಗ ಒದಗಿ ಬರುವುದೋ ಆಗಲೇ ಕಾಲ-ಅಕಾಲ ಪರಿಗಣಿಸದೆ ಸತ್ಕಾರ್ಯಗಳನ್ನು ಮಾಡಿ ಮುಗಿಸುವುದು ಒಳ್ಳೆಯದು.

*('ಶ್ರೀ ಶಾರದಾದೇವಿ ವಚನವೇದ', ಪು. ೪೭೦–೫೭)*